# ಕರ್ನಾಟಕ ಪಕ್ಷಾಂತರ ವಿವಾದ ಬೆನ್ನಲ್ಲೇ ಸ್ಪೀಕರ್‌ಗಳ ಸಭೆ

**ದೆಹ್ರಾಡೂನ್:** ಕರ್ನಾಟಕದಲ್ಲಿ 17 ಶಾಸಕರನ್ನು ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಳಿಸಿದ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿ ಇತ್ಯರ್ಥವಾದ ಬೆನ್ನಲ್ಲೇ, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಎರಡು ದಿನಗಳ ಸ್ಪೀಕರ್‌ಗಳ ಸಮ್ಮೇಳನವನ್ನು ನಡೆಸಿದ್ದಾರೆ. ಈ ವೇಳೆ ಪಕ್ಷಾಂತರ ನಿಷೇಧ ಕಾಯ್ದೆಗೆ ಸಂಬಂಧಿಸಿದ 10ನೇ ಶೆಡ್ಯೂಲ್ ಕುರಿತು ಸುದೀರ್ಘ ಚರ್ಚೆ ನಡೆಸಲಾಗಿದೆ. ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿನ ಅಂಶಗಳ ಕುರಿತು ಪರಿಶೀಲನೆ ನಡೆಸಲು ಸ್ಪೀಕರ್‌ಗಳ ಸಮಿತಿಯೊಂದನ್ನು ರಚಿಸಲಾಗಿದೆ. ಆ ಸಮಿತಿ ಶೀಘ್ರದಲ್ಲೇ ವರದಿ ಸಲ್ಲಿಸಲಿದೆ.

ಸಮ್ಮೇಳನದ ಎರಡನೇ ದಿನವಾದ ಗುರುವಾರ ಪಿಟಿಐ ಸುದ್ದಿಸಂಸ್ಥೆ ಜತೆ ಮಾತನಾಡಿದ ಓಂ ಬಿರ್ಲಾ, ಪಕ್ಷಾಂತರ ನಿಷೇಧ ಕುರಿತ ನಿರ್ಧಾರಗಳನ್ನು ಕಾಲಮಿತಿಯಲ್ಲಿ ಸ್ಪೀಕರ್‌ಗಳು ತೆಗೆದುಕೊಳ್ಳಬೇಕು. ಆ ನಿರ್ಧಾರಗಳು ತಟಸ್ಥವಾಗಿರಬೇಕು. ನಿಷ್ಪಕ್ಷಪಾತ ಹಾಗೂ ವಿವಾದರಹಿತವಾಗಿರಬೇಕು. ಆ ತೀರ್ಮಾನವನ್ನು ನ್ಯಾಯಾಂಗ ಸೇರಿದಂತೆ ಯಾರೂ ಪ್ರಶ್ನಿಸುವಂತಿರಬಾರದು ಎಂದು ಸಲಹೆ ಮಾಡಿದರು.